


ಸಂಪುಟ–೪ ಜೂನ್–ನವಂಬರ್ ೨೦೧೦ ಸಂಚಿಕೆ–೫

**ಗುರುವಾಣಿ**

# ಗೋಮಾತೆಗಾಗಿ ಎದ್ದೇಳಿ



ಭಾರತಕ್ಕೆ ಪರಮಾತ್ಮ ಹಲವು ರತ್ನಗಳನ್ನು ಕೊಟ್ಟಿದ್ದಾರೆ. ದೇಶದ ಮೂರು ದಿಕ್ಕಲ್ಲಿ ಸಾಗರಗಳು, ಉತ್ತರದಲ್ಲಿ ಹಿಮಾಲಯ ಶ್ರೇಣಿ, ಗಂಗಾಮಾತೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಗೋಮಾತೆ ಇವೆಲ್ಲವನ್ನೂ ಕೊಟ್ಟಿದ್ದಾನೆ. ಅವೆಲ್ಲವುಗಳಲ್ಲಿ ಗೋಮಾತೆ ದುರ್ಲಭರತ್ನ. ಅದನ್ನಿಂದುಳಿಸಿಕೊಳ್ಳಬೇಕಾಗಿದೆ. ಗೋವಿನ ಪೀಡೆಯನ್ನು ಅರ್ಥಮಾಡಿಕೊಳ್ಳಿ. ಹಲವು ಪ್ರಜಾತಿಗಳು ಇಂದು ಸಂಪೂರ್ಣ ನಷ್ಟವಾಗಿವೆ. ಇನ್ನುಳಿದವನ್ನಾದರೂ ಉಳಿಸಿಕೊಳ್ಳದಿದ್ದಲ್ಲಿ ಮುಂದೆ ಅವಕಾಶವೇ ಸಿಗದಿದ್ದೀತು. ಭಾರತದ ಆರ್ಥಿಕ ಬಲವೇ ಗೋಮಾತೆ. ಭಾರತದ ಆರೋಗ್ಯ ಭಂಡಾರ ಗೋಮಾತೆ. ನಮ್ಮ ಪುರಾಣಗಳ ಪ್ರಕಾರವೂ ಗೋಮಾತೆಯ ಮೌಲ್ಯವನ್ನು ವಿವರಿಸುವ ಹಲವು ಘಟನೆಗಳಿವೆ. ಗೋವು ಮತ್ತು ನಂದಿ ಸಂತರಿಂದ ಮಿಗಿಲು. ಆದರೆ ಅಂತಹ ನಂದಿಗೆ ಇಂದು ಎಲ್ಲೂ ಸ್ಥಾನವೇ ಇಲ್ಲ ಎಂದು ವಿಷಾದವಾಗುತ್ತಿದೆ.

ಹೆಮ್ಮೆಯಿಂದ ಹೇಳುವುದಿದೆ “ಇದು ನನ್ನ ಮನೆ, ನನ್ನ ಕಾರು, ನನ್ನ ಮಗು...”. ಇದೇ ಮಾದರಿಯಲ್ಲಿ “ಇದು ನನ್ನ ಹಸು” –ಈ ಕಾಳಜಿ, ಪ್ರೇಮ ಸಾಧ್ಯವಿಲ್ಲವೇ? ಹಸು ತನ್ನ ಪ್ರೇಮರಸವನ್ನು ಊಡಿಸಿ ನಮ್ಮೆಲ್ಲರ ಜೀವಗಳನ್ನು ಪೊರೆದು ನಮ್ಮ ಹತ್ತಿರದ ಸಂಬಂಧಿಯಾಗಿದ್ದಾಳೆ. ಅದರೊಟ್ಟಿಗೇ ದುಃಖದ ಸಂಗತಿಯೆಂದರೆ ಅವಳ ಸಂತತಿಯೇ ನಾಶವಾಗುವ ದಿನಗಳು ಬರಬಹುದೆಂಬ ಆತಂಕವೂ ಮೂಡುತ್ತಿದೆ. ಆ ಆಘಾತಕ್ಕೀಡಾಗುವ ಮೊದಲೇ ಗೋಮಾತೆಯೊಂದಿಗಿನ ಸಂಬಂಧದ ಹಾರ್ದಿಕ ಬಂಧವನ್ನು ನೆನೆದು “ಗೋಬಂಧು”ಗಳಾಗೋಣ. ಅವಳ ಮೇಲೆ ಪ್ರೇಮದ ಧಾರೆಗಳನ್ನೇ ಎರೆಯೋಣ.

ಒಂದು ಹಸು/ ಒಂದು ಹೋರಿ/ ಒಂದು ಕರುವನ್ನು ದತ್ತು ತೆಗೆದುಕೊಳ್ಳುವುದರ ಮುಖೇನ ಗೋವಿನ ಬಗೆಗಿನ ಕಾಳಜಿ, ಪ್ರೇಮಗಳನ್ನು ಎತ್ತರೆತ್ತರಕ್ಕೆ ಬೆಳೆಸೋಣ. ಗೋವಿನ ಬಗೆಗೊಂದು ಆಪ್ತಭಾವ ಮೂಡಿಸೋಣ.

ಸರಕಾರ ಸಾವಯವ ಕೃಷಿಗೆ ಪ್ರೋತ್ಸಾಹ ನೀಡುವ ಬದಲು ರಾಸಾಯನಿಕ ಗೊಬ್ಬರಕ್ಕೆ ಸಹಾಯ ನೀಡುತ್ತಿದೆ, ಇದೆಂತಹ ವಿಪರ್ಯಾಸ?

ಗೋರಕ್ಷಣೆ ಮೂಕದರ್ಶನದಿಂದ ಸಾಧ್ಯವಿಲ್ಲ. ಎದ್ದೇಳಿ, ಗೋಮಾತೆಯ ಉಳಿವಿಗಾಗಿ ಸಂಗ್ರಾಮಕ್ಕೆ. ಭಾರತದಲ್ಲಿ ಮತ್ತೊಮ್ಮೆ ಧರ್ಮಭಾರತ ಉದಯವಾಗಲಿ, ಧರ್ಮದ ಬೆಳಕು ನಮ್ಮನ್ನು ಮುನ್ನಡೆಸಲಿ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

**ಹೂರಣ**

**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು: ಗಂಗಾತೀರಿ**
**ಯೋಗಾಚಾರ್ಯ ಶ್ರೀ ನಾರಾಯಣ ಸ್ವಾಮೀಜಿ ಸಂದರ್ಶನ**

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org
ಸಂಪರ್ಕ: govishva@gmail.com






## ಪ್ರಶ್ನೋತ್ತರ

ಪ್ರಶ್ನೆ: ನಮ್ಮದು ಕೃಷಿ ಪ್ರಧಾನ ದೇಶ, ಹಾಗಿದ್ದರೂ ಗೋಮೂತ್ರ, ಗೋಮಯಗಳ ಬಳಕೆ ಕೃಷಿಯಲ್ಲಿ ಪರಿಣಾಮಕಾರಿಯಾಗಿ ಯಾಕೆ ಆಗುತ್ತಿಲ್ಲ?

ಉ: ಗೋಮೂತ್ರ, ಗೋಮಯಗಳ ಬಳಕೆ ಕುರಿತು ಜನರಿಗೆ ತಿಳಿಸಿಕೊಡುವ ಕಾರ್ಯ, ಸರಕಾರಿ ಮಟ್ಟದಲ್ಲಿ ಯೋಜನೆಗಳು ಕಾರ್ಯಗತವಾದಾಗ ಪರಿಣಾಮಕಾರಿಯಾಗುತ್ತದೆ.

ಪ್ರ: ಸಂಶೋಧಿಸಿದ ರಾಸಾಯನಿಕ ಗೊಬ್ಬರಗಳಿಗಿಂತ ಗೋಮೂತ್ರ, ಗೋಮಯಗಳ ಗೊಬ್ಬರಗಳು ಶ್ರೇಷ್ಠವೇ? ಆದರೆ ಹೇಗೆ?

ಉ: ರಾಸಾಯನಿಕ ಗೊಬ್ಬರಗಳಿಂದ ಗೋ ಗೊಬ್ಬರಗಳು ಶ್ರೇಷ್ಠ. ಯಾಕೆಂದರೆ ಮಣ್ಣಿನ ಫಲವತ್ತನ್ನು ಜಾಸ್ತಿ ಮಾಡುವ ಸಾಮರ್ಥ್ಯ ಇದೆ. ಎರೆಹುಳಗಳು ಪರಿಣಾಮಕಾರಿಯಾಗಿ ಬೆಳೆಯಲು ಗೋಗೊಬ್ಬರಗಳು ಮಾತ್ರ ಸೂಕ್ತ. ರಾಸಾಯನಿಕ ಗೊಬ್ಬರದಿಂದ ಎರೆಹುಳಗಳು ಸಾಯುತ್ತವೆ.

**– ಸಂಗ್ರಹ: ಉಲ್ಲಾಸ್ ಸಿ. ಕೆ.**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 32ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಗಂಗಾತೀರಿ

**ಉತ್ತರ ಭಾರತದ ಗಂಗಾನದಿ ತೀರದ ಈ ತಳಿ ನಾಶದ ಅಂಚಿನಲ್ಲಿದೆ. ಬೇಕಾದಷ್ಟು ಹಾಲು ಕೊಡುವುದರ ಜೊತೆ ಕೆಲಸಕ್ಕೆ ಹೆಗಲೂ ನೀಡಬಲ್ಲ ಬಲಿಷ್ಠ ತಳಿ ಇದು. ಗಂಗಾತೀರಿಯನ್ನು ಉಳಿಸಲೋಸುಗವೇ ಇರುವ ಒಂದೇ ಒಂದು ಗೋಶಾಲೆ ವಾರಣಾಸಿಯಲ್ಲಿದೆ.**

ಗಂಗಾತೀರ ಹಸುಗಳಿಗೆ ಆ ಹೆಸರು ಬರಲು ಕಾರಣ ಅವುಗಳು ಗಂಗಾನದಿ ತೀರದಲ್ಲಿ ಬದುಕುತ್ತಿದ್ದುದ್ದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಅವುಗಳು ಕಂಡುಬರುತ್ತಿದ್ದುದ್ದು ಅಲಹಾಬಾದ್ ಜಿಲ್ಲೆಯ ವಾರಣಾಸಿ ಪ್ರದೇಶದಲ್ಲಿ. ಗಂಗೆಯ ನೀರು ಕುಡಿದು ಹಾಲಿನ ಪವಿತ್ರತೆಗೆ ಆತ್ಯಂತಿಕತೆಯನ್ನು ತಂದುಕೊಡುವ ಒಂದು ಅಪೂರ್ವ ತಳಿ ಇದು!

ಇವು ಆಕಾರದಲ್ಲಿ ಕೊಂಚ ಮಾಳ್ವಿ ಮತ್ತು ಹರಿಯಾಣ ತಳಿಯನ್ನು ಹೋಲುತ್ತವೆ. ಬಿಳಿಯ ಬಣ್ಣ. ಸದೃಡ ಶರೀರಿಗಳು. ಕಾಲುಗಳು ಉದ್ದ ಹಾಗೂ ಬಲಶಾಲಿ. ಪಾದದ ತುದಿಗಳು ಸಾಮಾನ್ಯವಾಗಿ ಕಪ್ಪು ಬಣ್ಣದ್ದು. ಕಡುಗಪ್ಪು ಬಣ್ಣದ ಬಾಲಗಳು ನೆಲಕ್ಕು ತಾಗುವಂತಿರುತ್ತದೆ. ಹೋರಿಗಳ ಸಾಮಾನ್ಯ ಎತ್ತರ ಅಂದಾಜು 150ಸೆಮೀ, ಹಸುಗಳದ್ದು 140ಸೆಮೀ. ಹೋರಿಗಳ ಸಾಮಾನ್ಯ ತೂಕ 500ಕಿಗ್ರಾಂ, ಗೋವುಗಳದ್ದು ಸುಮಾರು 350ಕಿಗ್ರಾಂ.

ಗಂಗಾತೀರಿ ಉಭಯೋಪಯೋಗಿ ತಳಿ. ಅಂದರೆ ಗಂಗಾತೀರಿ ಹಸುಗಳನ್ನು ಹಾಲು ಉತ್ಪಾದನೆಗಾಗಿಯೂ ಹಾಗೂ ಉಳುಮೆ ಇತ್ಯಾದಿಗಳಿಗಾಗಿಯೂ ಉಪಯೋಗಿಸುತ್ತಾರೆ. 6 ರಿಂದ 8 ಲೀಟರ್‌ನಷ್ಟು ಹಾಲನ್ನು ಕೊಡಬಲ್ಲದು ಜೊತೆಗೆ ಎಂಥಾ ಕಷ್ಟದ ಕೆಲಸಕ್ಕೂ ರೈತನಿಗೆ ಹೆಗಲು ಕೊಡಬಲ್ಲುದು. ಏನಿದ್ದರೇನು



**ಮೂಲ : ಗಂಗಾನದಿ ತೀರ ಪ್ರದೇಶಗಳಾದ ಬಿಹಾರ, ವಾರಣಾಸಿ**
**ವಿಭಾಗ : ಉಭಯ**
**ಬಣ್ಣ : ಬಿಳಿ**
**ಮುಖ : ಸಪೂರ, ನೀಳ**
**ಮೂತಿ : ಕಪ್ಪು**
**ಕೊಂಬು : ಸಣ್ಣ**
**ಕಣ್ಣು : ಕಪ್ಪು**
**ಬಾಲ : ನೀಳ ಹಾಗೂ ತುದಿ ಕಪ್ಪು**



ಅದರೊಡೆಯನಿಗೆ ಅದರ ಬೆಲೆ ತಿಳಿಯದಿದ್ದರೆ?

ಗಂಗಾತೀರಿ ಈಗ ಅಳಿವಿನಂಚಿಗೆ ಸರಿದಿದೆ. ಈಗ ಇಡೀ ಭಾರತ ಜಾಲಾಡಿದರೂ ನೂರು ಹಸು ಸಿಕ್ಕರೆ ಭಾರತಮಾತೆ ಧನ್ಯ.

ಇಂತಿದ್ದರೂ ಈ ತಳಿಯನ್ನು ಉಳಿಸಿ ಬೆಳೆಸುವ ಬಗ್ಗೆ ಭಾರತ ಸರ್ಕಾರ ಇದುವರೆಗೆ ಗಮನ ಹರಿಸಿಲ್ಲ. ಗಂಗಾತೀರಿಯನ್ನು ಉಳಿಸಲೋಸುಗವೇ ಇರುವ ಒಂದೇ ಒಂದು ಗೋಶಾಲೆ ವಾರಣಾಸಿಯಲ್ಲಿದೆ. ತನ್ಮೂಲಕ ಗಂಗಾತೀರಿಯ ಉಳಿವಿಗಾಗಿ ಶ್ರಮಿಸುತ್ತಿರುವವರ ಹೆಸರು ಸೂರ್ಯಕಾಂತ ಜಲನ್ ಎಂಬುದಾಗಿ. ತುಂಬಾ ಶುದ್ಧ ಹಾಗೂ ಉತ್ತಮ ಗೋವುಗಳ ಸಂಗ್ರಹ ಈ ಗೋಶಾಲೆಯಲ್ಲಿದೆ. ಸರ್ಕಾರಕ್ಕೂ ಅದು ಸಾಕಿಕೊಂಡಿರುವ ಬಿಳಿಯಾನೆಯಂಥಾ ಇಲಾಖೆಗಳಿಗೂ ಗಂಗಾತೀರಿಯ ಹಿರಿಮೆ ತಿಳಿಸಲು ಸೂರ್ಯಕಾಂತ್ ಜಲನ್ ಹೋರಾಡುತ್ತಿದ್ದಾರೆ. ಇಂಥವರನ್ನು ಕಂಡಾಗ ಕಾಲ ಇನ್ನೂ ಪೂರ್ಣ ಕೆಟ್ಟಿಲ್ಲವೇನೋ ಎನ್ನಿಸುತ್ತದೆ. ಏನೆನ್ನುತ್ತೀರಿ?

**– ಮಧುಕೇಶ ದೊಡ್ಡೇರಿ**



ಸಾಧಕ

# ಯೋಗಾಚಾರ್ಯ ಶ್ರೀ ನಾರಾಯಣ ಸ್ವಾಮೀಜಿ

**ಗೋಸೇವೆಯಲ್ಲಿ ತೊಡಗಿಸಿಕೊಂಡ ಗೋಸೇವಕ ಸಾಧಕರು ನಮ್ಮ ದೇಶದಲ್ಲಿ ನೂರಾರು ಮಂದಿ ಇದ್ದಾರೆ. ಇವರ ಸಂಖ್ಯೆ ಸಹಸ್ರಾರು ಆಗಬೇಕಾಗಿದೆ. ಅಂತಹ ಒಬ್ಬ ಸಾಧಕರ ಪರಿಚಯ ಮತ್ತು ಸಂದರ್ಶನ ಇಲ್ಲಿದೆ.**

ಮೈಸೂರಿನ ಹೊರವಲಯದ ಬೋಗಾದಿಯಲ್ಲಿರುವ ಯೋಗಾಚಾರ್ಯ ಶ್ರೀ ನಾರಾಯಣ ಸ್ವಾಮೀಜಿ ಶಾಲೆ ಮತ್ತು ಗೋಶಾಲೆ ನಡೆಸುತ್ತ ಸಮಾಜಸೇವೆ ಮಾಡುತ್ತಿದ್ದಾರೆ. ಶಿಕ್ಷಣತಜ್ಞರಾಗಿ, ಅಧ್ಯಾತ್ಮದ ಗುರುವಾಗಿ, ಯೋಗ ಮತ್ತು ಗವ್ಯ ಚಿಕಿತ್ಸೆಯಿಂದ ಬಹುತೇಕ ರೋಗಗಳನ್ನು ಗುಣಮಾಡಬಹುದು ಎಂಬುದನ್ನು ಬಲವಾಗಿ ನಂಬಿದ್ದಾರೆ. ಈ ನಂಬಿಕೆ ಕುರುಡು ನಂಬಿಕೆಯಲ್ಲ. ಆಚರಣೆಯ ಮೂಲಕ ಪ್ರಯೋಗಾತ್ಮಕವಾಗಿ ಮಾಡಿತೋರಿಸಿದ್ದಾರೆ. ಇವರು ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮೀಜಿಯವರಿಂದ ಯೋಗ ಮತ್ತು ಆಯುರ್ವೇದ ಚಿಕಿತ್ಸೆಗಳನ್ನು ಕಲಿತು ತಮ್ಮ ಜ್ಞಾನದ ಪ್ರಯೋಜನವನ್ನು ಅಗತ್ಯವಿರುವವರಿಗೆ ಉಚಿತವಾಗಿ ನೀಡುತ್ತಿದ್ದಾರೆ.



ಹಲವು ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಾರಾಯಣ ಸ್ವಾಮೀಜಿ ತಮ್ಮ ವೃತ್ತಿಜೀವನವನ್ನು ಅಳಿಕೆಯ ಶಾಲೆಯಲ್ಲಿ ಪ್ರಾರಂಭಿಸಿದರು. ಸದ್ಯ ಮೈಸೂರಿನ ಬೋಗಾದಿಯಲ್ಲಿ ತಾವೇ ಸ್ಥಾಪಿಸಿದ ಸಾಯಿಸರಸ್ವತಿ ವಿದ್ಯಾಕೇಂದ್ರದಲ್ಲಿ ಪೂರ್ಣಾವಧಿ ತೊಡಗಿಸಿಕೊಂಡಿದ್ದಾರೆ. ಅದು ಕೇವಲ ವಿದ್ಯಾಶಾಲೆಯಲ್ಲ. ಜೊತೆಯಲ್ಲಿ ಗೋಶಾಲೆ, ವೈದ್ಯಶಾಲೆ, ವೇದಶಾಲೆ ಮತ್ತು ಯೋಗಶಾಲೆಗಳೂ ಇವೆ. ಇದು ನಗರದಲ್ಲಿಯೇ ಇರುವ ಶಿಕ್ಷಣ ಸಂಸ್ಥೆಯಾದರೂ ಮಕ್ಕಳಿಗೆ ಹಳ್ಳಿಯ ಜೀವನ ಶೈಲಿಯನ್ನೂ ಕಲಿಸಿಕೊಡುತ್ತದೆ. ಗೋಶಾಲೆಯಲ್ಲಿ ಒಟ್ಟು 43 ಗೋವುಗಳಿವೆ. ಎಲ್ಲವೂ ಭಾರತೀಯ ತಳಿಯ ಗೋವುಗಳೇ. ಹಸುಗಳನ್ನು ಸಾಕುವುದೂ ಇಲ್ಲಿಯ ವಿದ್ಯಾರ್ಥಿಗಳಿಗೆ ಒಂದು ಪಾಠ. ಗೋಶಾಲೆ, ಗಿಡಮೂಲಿಕಾವನಗಳ ನಿರ್ವಹಣೆಯಲ್ಲೂ ಮಕ್ಕಳನ್ನು ಬಳಸಿಕೊಳ್ಳಲಾಗುತ್ತದೆ.

## ಶ್ರೀ ನಾರಾಯಣ ಸ್ವಾಮೀಜಿಯವರ ಸಂದರ್ಶನ

ಪ್ರ: ನೀವು ಶಾಲೆ ಪ್ರಾರಂಭ ಮಾಡಿದ್ದು ಯಾವಾಗ?

ಸ್ವಾಮೀಜಿ: ಪ್ರಾಥಮಿಕ ಶಾಲೆ 1990ರಲ್ಲಿ, ಮಾಧ್ಯಮಿಕ ಶಾಲೆ 1995ರಲ್ಲಿ ಹಾಗೂ ಜೂನಿಯರ್ ಕಾಲೇಜು 1998ರಲ್ಲಿ. ಆದರೆ ಆರ್ಥಿಕ ತೊಂದರೆಯಿಂದ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದ ಕಾರಣ ಜೂನಿಯರ್ ಕಾಲೇಜನ್ನು 2000ರಲ್ಲಿ ಸ್ಥಗಿತಗೊಳಿಸಲಾಯಿತು.

ಪ್ರ: ನಿಮ್ಮ ಗೋಶಾಲೆಯ ಬಗ್ಗೆ ತಿಳಿಸಿ.

ಸ್ವಾಮೀಜಿ: ನಾವು ಗೋಶಾಲೆ ಪ್ರಾರಂಭಿಸಿದ್ದು ಈ ಸಂಸ್ಥೆಯ ಜೊತೆಯೇ. ಗೋಶಾಲೆ ಮತ್ತು ಶಾಲೆ ಜೊತೆಜೊತೆಯಲ್ಲಿಯೇ ಪ್ರಾರಂಭವಾಗಿದ್ದು. 1987ರಲ್ಲಿ ನಾವು ಈ ಜಮೀನು ಖರೀದಿಸಿದ್ದು. ಖರೀದಿಸಿದ ಮೊದಲಿನ ದಿನದಿಂದ ಇದು ಗೋಶಾಲೆಯೂ ಹೌದು.

ಪ್ರ: ಗೋಶಾಲೆ ಮಾಡಲು ನಿಮಗೆ ಯಾಕೆ ಆಸಕ್ತಿ ಬಂತು?

ಸ್ವಾಮೀಜಿ: ಭಾರತದಲ್ಲಿ ಕೃಷಿಯ ಅವಿಭಾಜ್ಯ ಅಂಗ ಗೋವು. ನಾನಿಲ್ಲಿ ಕೃಷಿ ಭೂಮಿ ಕೊಂಡಾಗಲೇ ಗೋವನ್ನೂ ಸಾಕಿದೆ.

ಪ್ರ: ನಿಮ್ಮ ಗೋಶಾಲೆಯಲ್ಲಿ ಎಷ್ಟು ದನಗಳಿವೆ?

ಸ್ವಾಮೀಜಿ: ಇಲ್ಲಿ ಒಟ್ಟು 43 ಗೋವುಗಳಿವೆ. ಆದರೆ ನಮ್ಮ ಮಠಕ್ಕೆ ಸೇರಿದ 200ಕ್ಕೂ ಹೆಚ್ಚು ದನಗಳಿವೆ. ಅಂದರೆ, ಅವನ್ನು ನಾವು ಮಾರಾಟ ಮಾಡಿಲ್ಲ. ಬೇರೆಯವರಿಗೆ ಸಾಕಲು ಕೊಟ್ಟಿದ್ದೇವೆ.

ಪ್ರ: ಎಲ್ಲಾ ಭಾರತೀಯ ತಳಿಗಳೇ?

ಸ್ವಾಮೀಜಿ: ಹೌದು. ಬೇರೆ ಜಾತಿಯ ತಳಿಗಳನ್ನು ನಾವು ಸಾಕುವುದಿಲ್ಲ.

ಪ್ರ: ಎಷ್ಟು ತಳಿಗಳಿವೆ?

ಸ್ವಾಮೀಜಿ: ಒಟ್ಟು 4. ಅಮೃತಮಹಲು, ಹಳ್ಳಿಕಾರು, ಮಲೆನಾಡು ಗಿಡ್ಡ ಮತ್ತು ಕಾಂಕ್ರೇಜ್.

ಪ್ರ: ಭಾರತೀಯ ತಳಿಗಳನ್ನೇ ಸಾಕಲು ಕಾರಣ?

ಸ್ವಾಮೀಜಿ: ಭಾರತೀಯ ತಳಿಗಳಲ್ಲಿ ಮಾತ್ರ ಔಷಧೀಯ ಗುಣಮಟ್ಟ ನಮ್ಮ ಅವಶ್ಯಕತೆಗೆ ತಕ್ಕಷ್ಟು ಇರುತ್ತದೆ.

ಪ್ರ: ಭಾರತೀಯ ತಳಿಗಳಲ್ಲಿ ಔಷಧೀಯ ಅಂಶ ಜಾಸ್ತಿ ಇರಲು ಕಾರಣ?

ಸ್ವಾಮೀಜಿ: ಒಂದು ತಳಿಯಲ್ಲಿ ಔಷಧೀಯ ಗುಣ ಪ್ರಧಾನವಾಗಿ ಆಹಾರದ ಮೇಲೆ ಅವಲಂಬಿಸಿರುತ್ತದೆ. ಆಯಾಯ ಪ್ರದೇಶದಲ್ಲಿರುವ ಹವಾಮಾನ, ಭೂ ಪ್ರಕೃತಿ, ಮಳೆ, ಇತ್ಯಾದಿಗಳನ್ನು ಇದು ಆಧರಿಸಿದೆ. ಮಲೆನಾಡಿನಲ್ಲಿರುವ ಔಷಧೀಯ ಸಸ್ಯಗಳು ಬಯಲು ಸೀಮೆಯಲ್ಲಿ ಕಾಣದಿರಬಹುದು. ಆದರೆ ಪರ್ಯಾಯವಾಗಿ ಬೇರಾವುದೋ ಹುಲ್ಲು ಇದ್ದೇ ಇರುತ್ತದೆ. ಹಸುಗಳಿಗೆ ಯಾವುದನ್ನು ಎಷ್ಟು ಪ್ರಮಾಣದಲ್ಲಿ ತಿನ್ನಬೇಕೆಂಬುದರ ಅರಿವು ಇರುತ್ತದೆ. ಕರುವಿಗೂ ಸಹ ಯಾವುದನ್ನು ತಿನ್ನಬೇಕು ಯಾವುದನ್ನು ತಿನ್ನಬಾರದು ಎಂದು ಹಸು ಹೇಳಿಕೊಡುತ್ತದೆ. ಇದಲ್ಲದೇ ಜೆನೆಟಿಕ್ಸ್ ಮೇಲೂ ಅವಲಂಬಿಸಿದೆ. ಭಾರತೀಯ ತಳಿಯ ಗೋವುಗಳಲ್ಲಿ ಇರುವ ನಾಡಿ ವ್ಯವಸ್ಥೆ, ಚರ್ಮದ ಬಣ್ಣ, ಮೈಯ ರಚನೆ ಇವು ಸೂರ್ಯ ಕಿರಣಗಳನ್ನು ಹೀರಿಕೊಂಡು ಔಷಧೀಯ ಗುಣವಾಗಿ ಪರಿವರ್ತಿಸುವ ವಿಶೇಷ ಸಾಮರ್ಥ್ಯ ನಾಡಹಸುಗಳಿವೆ.



ಪ್ರ: ಗೋಮೂತ್ರದಲ್ಲಿ ಏನು ಶಕ್ತಿ ಇದೆ?

ಸ್ವಾಮೀಜಿ: ರಾಸಾಯನಿಕ ವಿಶ್ಲೇಷಣೆಯ ಪ್ರಕಾರ ಗೋಮೂತ್ರದಲ್ಲಿ 112 ಉಪಯುಕ್ತ ರಾಸಾಯನಿಕಗಳಿವೆ. ಯಾವುದೇ ವ್ಯಕ್ತಿ ಅದನ್ನು ಸೇವಿಸಿದರೂ ಯಾವುದು ಶರೀರಕ್ಕೆ ಅವಶ್ಯಕತೆ ಇದೆಯೋ ಅದನ್ನು ಮಾತ್ರ ತೆಗೆದುಕೊಳ್ಳುವ ಬುದ್ಧಿವಂತಿಕೆ ಶರೀರಕ್ಕಿದೆ.

ಪ್ರ: ಗೋಮೂತ್ರವನ್ನು ಯಾರು ಬೇಕಿದ್ದರೂ ಹೇಗೆ ಬೇಕಾದರೂ ತೆಗೆದುಕೊಳ್ಳಬಹುದಾ ಅಥವಾ ವೈದ್ಯರ ಸಲಹೆ ಬೇಕಾ?

ಸ್ವಾಮೀಜಿ: ಸಲಹೆ ಒಳ್ಳೆಯದು. ಗೋಮೂತ್ರವನ್ನು ಹಿಡಿದ ತಕ್ಷಣ ಬಿಸಿ ಆರುವುದರ ಮೊದಲು ಕುಡಿಯಬೇಕು. ತಣ್ಣಗಾದ ಮೇಲೆ ಸೋಸಿ ಕುಡಿಯುವುದು ಒಳ್ಳೆಯದು.

ಪ್ರ: ಗೋಅರ್ಕ ಗೋಮೂತ್ರದಷ್ಟೇ ಪರಿಣಾಮಕಾರಿಯೇ?

ಸ್ವಾಮೀಜಿ: ಅಲ್ಲ. ಯಾಕೆಂದರೆ ಗೋಅರ್ಕ ಮಾಡುವಾಗ ಗೋಮೂತ್ರವನ್ನು ಭಟ್ಟಿ ಇಳಿಸುತ್ತೇವೆ. ಭಟ್ಟಿ ಇಳಿಸುವಾಗ ಕೆಲವು ವೈದ್ಯಕೀಯ ಅಂಶಗಳು ನಾಶವಾಗುತ್ತವೆ.

ಪ್ರ: ಯಾವ ಯಾವ ಖಾಯಿಲೆಗಳು ಗವ್ಯ ಚಿಕಿತ್ಸೆಯಿಂದ ಗುಣವಾಗಿವೆ?



ಸ್ವಾಮೀಜಿ: ಸಾಮಾನ್ಯವಾಗಿ ಪ್ರಾಣಾಪಾಯದಂತಹ ಗಂಭೀರ ಪರಿಸ್ಥಿತಿಗಳನ್ನು ಬಿಟ್ಟರೆ ಇನ್ನೆಲ್ಲಾ ಖಾಯಿಲೆಗೆಳಿಗೆ ಗವ್ಯ ಚಿಕಿತ್ಸೆ ಪರಿಣಾಮಕಾರಿ.

ಪ್ರ: ಇಲ್ಲಿ ಎಷ್ಟು ವಿಧದ ಔಷಧಿಗಳನ್ನು ತಯಾರಿಸುತ್ತೀರಾ?

ಸ್ವಾಮೀಜಿ: ಒಟ್ಟು 26 ರೀತಿಯ ಔಷಧಿಗಳನ್ನು ತಯಾರಿಸುತ್ತೇವೆ.

ಪ್ರ: ಅಂದಾಜು ಎಷ್ಟು ರೋಗಿಗಳು ಗುಣವಾಗಿದ್ದಾರೆ?

ಸ್ವಾಮೀಜಿ: ನೂರಕ್ಕೂ ಹೆಚ್ಚು ಕ್ಯಾನ್ಸರ್, 14 ಏಡ್ಸ್, ಸಾವಿರಕ್ಕೂ ಹೆಚ್ಚು ಡಯಾಬೆಟಿಕ್ ರೋಗಿಗಳು, ಆಸ್ತಮಾ, ರಕ್ತದೊತ್ತಡ, ಗ್ಲೂಕೋಡರ್ಮ ಈ ಎಲ್ಲ ಖಾಯಿಲೆಗಳು ಗುಣವಾಗಿವೆ.

ಪ್ರ: ಗೋಹತ್ಯೆ ನಿಷೇಧದ ಬಗ್ಗೆ ನಿಮ್ಮ ಅಭಿಪ್ರಾಯ? ಅಲ್ಪಸಂಖ್ಯಾತರೂ ಹಾಗೂ ದಲಿತರು ನಮ್ಮ ಆಹಾರ ಪದ್ಧತಿಗೆ ಗೋಹತ್ಯೆ ನಿಷೇಧವು ಅಡ್ಡಿ ಎನ್ನುತ್ತಾರಲ್ಲ?

ಸ್ವಾಮೀಜಿ: ಅತೀ ಪುರಾತನ ಕಾಲದಲ್ಲಿ ಎಲ್ಲರೂ ಗೋಮಾಂಸ ತಿನ್ನುತ್ತಿದ್ದರು. ಆದರೆ ಆ ಕಾಲಕ್ಕೂ ಈ ಕಾಲಕ್ಕೂ ವ್ಯತ್ಯಾಸವಿದೆ. ಸಮಾಜ ಮಾನವ ಕುಲ ಸುಸಂಸ್ಕೃತವಾದಂತೆ ಆಹಾರವೂ ಸುಸಂಸ್ಕೃತವಾಯಿತು. ನಾವು ಮುಂದುವರೆದಿದ್ದೇವೆ ಎಂದು ಹೇಳುವ ಜನ ಆಹಾರದಲ್ಲೂ ಆ ಮುಂದುವರಿಕೆ ವೈಜ್ಞಾನಿಕತೆ ತೋರಿಸಬೇಕು. ನನ್ನ ದೃಷ್ಟಿಯಲ್ಲಿ ಸಸ್ಯಾಹಾರ ನಾಗರೀಕ ಆಹಾರ. ಗೋಮಾಂಸ ಮಾತ್ರವಲ್ಲ ಎಲ್ಲ ಮಾಂಸವೂ ಅನಾಗರೀಕ.

ಪ್ರ: ಹಾಗಾದರೆ ಗೋಹತ್ಯೆಯನ್ನೇ ಯಾಕೆ ನಿಷೇಧ ಮಾಡಬೇಕು?

ಸ್ವಾಮೀಜಿ: ಎಲ್ಲಾ ಮಾಂಸವನ್ನು ಹಂತಹಂತವಾಗಿ ನಿಷೇಧಿಸಬೇಕು. ಇದು ಮೊದಲ ಹಂತವಷ್ಟೇ.

